ಮಾವನೂರಿನ ಭೂಮಿ ಸ್ಪರ್ಶಿಸುತ್ತಿದ್ದಂತೆ ಪಟಾಕಿ, ಗರ್ನಾಲುಗಳು ಸಿಡಿಯುತ್ತವೆ, ವಾದ್ಯಮೇಳ ಮೊಳಗುತ್ತವೆ. ನಾರಿಯರು ದೃಷ್ಟಿ ತೆಗೆದು, ಹಾರಹಾಕಿ, ತುರಾಯಿಯನ್ನಿತ್ತು, ಆರತಿ ಎತ್ತಿ, ಊರ ದೇವರ ಗುಡಿಗೆ ಹೋಗಿ ಕಾಯಿ, ಕರ್ಪೂರ ಸೇವೆ ಸಲ್ಲಿಸಿ, ಊರ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿ ಮನೆಗೆ ಕರೆ ತರುವರು. ಹಾಸಕ್ಕಿ ಮೇಲೆ ಮಗಳು, ಅಳಿಯನನ್ನು ಕೂಡ್ರಿಸಿ ಮುತ್ತೈದೆಯರು ಆರತಿ ಎತ್ತಿದ ಅನಂತರ, ಊರ ಪ್ರಮುಖರಿಗೆ ಊಟದ ಸಮಾರಾಧನೆ. ಬಂದ ಜನ ತಾಂಬೂಲ ಮೆಲ್ಲುತ್ತ, ಬೀಡಿ, ಸಿಗರೇಟು ಸೇದುತ್ತ ತಮ್ಮ ಮನೆ ಹಾದಿ ಹಿಡಿದರೆ, ಅಳಿಯದೇವರು ಹೆಂಡತಿ ಜೊತೆ 'ಕೋಣೆ ಹೊಕ್ಕುಕೊಳ್ಳುವನು'.

ಅಳಿಯ ಮಾವನ ಮನೆಗೆ ಬಂದು ಇದ್ದು ಹೋದ ಎಂಬ ವಿಷಯವನ್ನು ಊರ ಜನರಿಗೆ ತಿಳಿಸುವ ಉದ್ದೇಶ ಇಲ್ಲಿದೆ. ಆದರೆ, ಇಂಥವುಗಳು ಕಾಲಾಂತರದಲ್ಲಿ ಸಂಪ್ರದಾಯಗಳಾಗಿ ಕೆಲವು ಶ್ರೀಮಂತರು, ಗೌಡರು, ಜಮೀನುದಾರರಿಗೆ ಪ್ರತಿಷ್ಠೆ ಹೆಚ್ಚಿಸುವ ಅವಕಾಶಗಳಾದರೆ, ಬಹುಸಂಖ್ಯಾತ ಬಡವರ ಪಾಡೇನು?

ಬಡತನವನ್ನೆ ಹೊದ್ದ ನನ್ನೂರಿನ ನನ್ನ ಗೆಳೆಯನೊಬ್ಬ ಸಾಕಷ್ಟು ಅಡಚಣೆಗಳ ಮಧ್ಯೆ ರಜಾದಿನಗಳಲ್ಲಿ ಅವರಿವರ ಹೊಲದಲ್ಲಿ ಕೂಲಿನಾಲಿ ಮಾಡಿ ಹಣ ಸಂಗ್ರಹಿಸಿಕೊಂಡು, ಪಡಬಾರದ ಕಷ್ಟಪಟ್ಟು, ಎಂ.ಎಸ್ಸಿ. ಪದವಿ ಪಡೆದು ಸರಕಾರಿ ಕಾಲೇಜಿನಲ್ಲಿ ಉಪನ್ಯಾಸಕನಾಗಿ ನೇಮಕಗೊಂಡಿದ್ದ. ನಮ್ಮ ಗ್ರಾಮೀಣ ಜನರಿಗೆ 'ನೌಕರಿ' ಅನಂತರದ ಹಂತ 'ಚೋಕರಿ' ಗಂಟುಹಾಕುವುದು. ಅವನ ತಾಯಿ ಹಾಗೂ ಊರ ಹಿರಿಯರು ಸೇರಿ ನಮ್ಮೂರ ಗೌಡರ ಸಂಬಂಧಿ ವಿಜಯಪುರ ಜಿಲ್ಲೆಯ ಒಂದು ಹಳ್ಳಿಯ ಗೌಡರ ಮಗಳ ಜೊತೆಗೆ ಲಗ್ನ ನಿಶ್ಚಯ ಮಾಡಿದರು. ಇವಳು ತನ್ನಪ್ಪನಿಗೆ ಒಬ್ಬಳೆ ಮಗಳು, ಗಂಡು ಸಂತಾನವಿಲ್ಲ. ಪಿ.ಯು.ಸಿ. ವರೆಗೆ ಓದಿದ್ದಳು, ನೋಡಲೂ ಚೆನ್ನಾಗಿದ್ದಳು. ಗೌಡರೆ ಮದುವೆಯನ್ನು

